ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

**ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ**

ಒನಕೆ ಓಬವ್ವ ವೃತ್ತ ದೂರವಾಣಿ ಸಂಖ್ಯೆ: 222811, 222538
ಚಿತ್ರದುರ್ಗ. ಫ್ಯಾಕ್ಸ್ ಸಂಖ್ಯೆ: 08194-224355

ನಂ.ಎಲ್.ಎ.ಕ್ಯೂ/ಸಿಆರ್/ /20 /18-19 ದಿನಾಂಕ:19-10-2020

## ಸಾಮಾಜಿಕ ಪರಿಣಾಮ ಮೌಲ್ಯಮಾಪನ ತಜ್ಞರ ಸಮಿತಿ ಶಿಫಾರಸ್ಸುಗಳನ್ನು ಒಳಗೊಂಡಂತೆ ಅಂತಿಮ ವರದಿ ಪ್ರಕಟಣೆ

*******

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಬಿ.ದುರ್ಗ ಹೋಬಳಿಯ ಕೋಟೆಹಾಳ್, ಕಸಬಾ ಹೋಬಳಿಯ ಪುಣಜೂರು, ರಾಮಗಿರಿ ಹೋಬಳಿಯ ಆರ್.ನುಲೇನೂರು ಮತ್ತು ರಾಮಗಿರಿ ಗ್ರಾಮಗಳಲ್ಲಿ ಜುಮ್ಲ 6-11 ಎಕರೆ ಜಮೀನು ಹೊಸದುರ್ಗ-ಚಿಕ್ಕಜಾಜೂರು ರೈಲ್ವೆ ಡಬ್ಲಿಂಗ್ ಯೋಜನೆಗೆ (2ನೇ ಹಂತ) ಭೂಸ್ವಾಧೀನ ಸಂಬಂಧ "ನ್ಯಾಯಾಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ಪಾರದರ್ಶಕತೆ, (ಕರ್ನಾಟಕ) ನಿಯಮಗಳು 2015 ರ ನಿಯಮ 3(6) ರಂತೆ ಸಾಮಾಜಿಕ ಪರಿಣಾಮ ನಿರ್ಧಾರಣೆ ಕಾರ್ಯವನ್ನು ಕೈಗೊಂಡು ಲೀಡ್, (ರಿ) ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ ಇವರು ಸಲ್ಲಿಸಿದ ಅಂತಿಮ ವರದಿಯನ್ನು ದಿನಾಂಕ:06-07-2020 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ರವರ ಕಛೇರಿಯಿಂದ ಅನುಮೋದನೆಗಾಗಿ ಮಾನ್ಯ ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು ಕಂದಾಯ ಇಲಾಖೆ ಬೆಂಗಳೂರು ಇವರಿಗೆ ಸಲ್ಲಿಸಲಾಗಿತ್ತು.

ಸದರಿ ಸಾಮಾಜಿಕ ಪರಿಣಾಮದ ನಿರ್ಧರಣಾಂಶದ ಅಧ್ಯಯನ ವರದಿಯ ಪರಾಮರ್ಶೆಗಾಗಿ ಸರ್ಕಾರದ ಆದೇಶ ಸಂಖ್ಯೆ ಕಂ.ಇ 91 ಬಿ.ಆರ್.ಆರ್ 2019 ಬೆಂಗಳೂರು ದಿನಾಂಕ:12-05-2020 ರಂತೆ ಶ್ರೀ ಎ.ಆಲ್ಫೋನ್ಸ್, ಅಧ್ಯಕ್ಷರು ಹಿರಿಯೂರು ತಾಲ್ಲೂಕು ಮೌಲ್ಯಮಾಪನ ತಜ್ಞರ ಸಮಿತಿ ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲಾಗಿದೆ. ತಜ್ಞರ ಸಮಿತಿ ಸದಸ್ಯರು ದಿನಾಂಕ:24-06-2020 ರಂದು ಸಭೆಯನ್ನು ನಡೆಸಿ ವರದಿಯ ಅಂಶಗಳ ಬಗ್ಗೆ ಪರಾಮರ್ಶಿಸಿ ಹಾಗೂ ಚರ್ಚಿಸಿ, ಕೆಲವೊಂದು ನ್ಯೂನತೆಗಳನ್ನು ಸರಿಪಡಿಸಿ, ಪ್ರಸ್ತಾಪಿತ ಯೋಜನೆಯು ಸಾರ್ವಜನಿಕ ಉದ್ದೇಶದಿಂದ ಕೂಡಿದ್ದು, ಯೋಜನೆಗೆ ಅಗತ್ಯವಿರುವ 6-11 ಎಕರೆ ವಿಸ್ತೀರ್ಣ ಅವಶ್ಯಕತೆ ಇರುವ ಬಗ್ಗೆ ಶಿಫಾರಸ್ಸು ಮಾಡಿ ದಿನಾಂಕ:16-02-2020 ರಂದು ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬೆಂಗಳೂರು ರವರಿಗೆ ಸಲ್ಲಿಸಲಾಗಿತ್ತು. ಸರ್ಕಾರದ ಆದೇಶ ಸಂಖ್ಯೆ ಕಂ.ಇ 91 ಬಿ.ಆರ್.ಆರ್ 2019 ಬೆಂಗಳೂರು ದಿನಾಂಕ:01-09-2020 ರಂತೆ ಸಾಮಾಜಿಕ ಪರಿಣಾಮದ ನಿರ್ಧರಣಾಂಶದ ಅಧ್ಯಯನ ಅಂತಿಮ ವರದಿಯನ್ನು ಅನುಮೋದನೆ ನೀಡಿರುತ್ತಾರೆ.

ಸದರಿ ಶಿಫಾರಸ್ಸಿನ ಅಂಶಗಳನ್ನು ಸಾಮಾಜಿಕ ಪರಿಣಾಮ ನಿರ್ವಹಣಾ ಯೋಜನೆಯೊಂದಿಗೆ ಸಾಮಾಜಿಕ ಪರಿಣಾಮ ಮೌಲ್ಯಮಾಪನ ವರದಿಯಲ್ಲಿ ಅಳವಡಿಸಿ ಅಂತಿಮ ವರದಿ ಸಲ್ಲಿಸಿರುವುದನ್ನು ನ್ಯಾಯಯುತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆಯಲ್ಲಿ ಪಾರದರ್ಶಕತೆ ಕಾಯ್ದೆ 2013 ರ ಕಲಂ.7(6)ರ ಪ್ರಕಾರ ಈ ಮೂಲಕ ಸಾರ್ವಜನಿಕರ ಗಮನಕ್ಕೆ ಪ್ರಚುರಪಡಿಸಲಾಗಿದೆ ತಜ್ಞರ ಸಮಿತಿ ಶಿಫಾರಸ್ಸುಗಳನ್ನು ಹಾಗೂ ಈ ಅಂಶಗಳನ್ನು ಒಳಗೊಂಡ ಅಂತಿಮ ವರದಿಯ ಪ್ರತಿಯನ್ನು ಜಿಲ್ಲಾಧಿಕಾರಿಗಳ ಕಛೇರಿ, ಚಿತ್ರದುರ್ಗ ಜಿಲ್ಲೆ, ಉಪವಿಭಾಗಾಧಿಕಾರಿ ಹಾಗೂ ಭೂಸ್ವಾಧೀನಾಧಿಕಾರಿ ಚಿತ್ರದುರ್ಗ ಉಪವಿಭಾಗ ಮತ್ತು ನಗರಸಭೆ, ಗ್ರಾಮಪಂಚಾಯಿತಿ ಕಛೇರಿಗಳಲ್ಲಿ ಇಡಲಾಗಿದೆ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು.

ಉಪವಿಭಾಗಾಧಿಕಾರಿ ಹಾಗೂ
ಭೂಸ್ವಾಧೀನಾಧಿಕಾರಿ
ಚಿತ್ರದುರ್ಗ ಉಪವಿಭಾಗ,
ಚಿತ್ರದುರ್ಗ

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ ಡಾ॥ಬಿ.ಆರ್.ಅಂಬೇಡ್ಕರ್ ವೀದಿ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ರಾಜ್ಯ ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಬೆಂಗಳೂರು ರವರಿಗೆ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು, ನಾರ್ತ್ ಕನ್‌ಸ್ಟ್ರಕ್ಷನ್, ರೋಡ್ ಸೌತ್ ವೆಸ್ಟ್ರನ್ ರೈಲ್ವೆ, 18 ಮಿಲ್ಲರ್ಸ್ ರೋಡ್ ಬೆಂಗಳೂರು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಸೌತ್ ವೆಸ್ಟ್ರನ್ ರೈಲ್ವೆ ಚಿಕ್ಕಜಾಜೂರು ಹೊಳಲ್ಕೆರೆ ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
5) ಎನ್.ಐ.ಸಿ ಅಧಿಕಾರಿ ಜಿಲ್ಲಾಧಿಕಾರಿಗಳ ಕಛೇರಿ ಚಿತ್ರದುರ್ಗ ಇವರಿಗೆ ಕಳುಹಿಸುತ್ತಾ, ಪ್ರಕಟಣೆಯನ್ನು ಜಿಲ್ಲಾ ಜಾಲತಾಣದಲ್ಲಿ ಮೆಲುನಕಲು (ಅಪ್‌ಲೋಡ್) ಮಾಡಲು ಕೋರಿದೆ.
6) ಲೀಡ್, (ರಿ) ಎ.ಪಿ.ಎಂ.ಸಿ ಯಾರ್ಡ್, ವಿನೋಬನಗರ, ಶಿವಮೊಗ್ಗ ಇವರಿಗೆ ಮಾಹಿತಿಗಾಗಿ ರವಾನಿಸಿದೆ.

ಸದರಿ ಪ್ರಕಟಣೆಯನ್ನು ಈ ಕೆಳಕಂಡ ಅಧೀನ ಕಛೇರಿಯ ಸೂಚನ ಫಲಕದಲ್ಲಿ ಪ್ರಚುರ ಪಡಿಸಿ, ಪ್ರಚುರಪಡಿಸಿದ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

7) ತಹಶೀಲ್ದಾರ್, ಹೊಳಲ್ಕೆರೆ ತಾಲ್ಲೂಕು..
8) ಮುಖ್ಯಾಧಿಕಾರಿ, ಪುರಸಭೆ, ಹೊಳಲ್ಕೆರೆ.
9) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು.
10) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮಪಂಚಾಯಿತಿ ಕಾರ್ಯಾಲಯ ಚಿಕ್ಕಮ್ಮಿಗನೂರು, ಗ್ರಾಮಪಂಚಾಯಿತಿ.
11) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮಪಂಚಾಯಿತಿ ಕಾರ್ಯಾಲಯ ಅರೇಹಳ್ಳಿ, ಗ್ರಾಮಪಂಚಾಯಿತಿ.
12) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮಪಂಚಾಯಿತಿ ಕಾರ್ಯಾಲಯ ರಾಮಗಿರಿ ಗ್ರಾಮಪಂಚಾಯಿತಿ.
13) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗ್ರಾಮಪಂಚಾಯಿತಿ ಕಾರ್ಯಾಲಯ, ಆರ್.ನುಲೇನೂರು ಗ್ರಾಮಪಂಚಾಯಿತಿ.